ದೂರವಾಣಿ / Phone : 0824-2287276
ಫ್ಯಾಕ್ಸ್ / Fax : 0824-2287424
ಇ-ಅಂಚೆ / E-mail : registrar@mangaloreuniversity.ac.in
registrarmangaloreuniversity@gmail.com
ವೆಬ್‌ಸೈಟ್ / Website : www.mangaloreuniversity.ac.in

# ಮಂಗಳೂರು ವಿಶ್ವವಿದ್ಯಾನಿಲಯ
# MANGALORE UNIVERSITY

ಕ್ರಮಾಂಕ/No.

ಮಂವಿ/ಕುಸ/ಸಿಂಡಿ/ಎಸ್2/71/2022/41873

ಕುಲಸಚಿವರ ಕಛೇರಿ,
ಮಂಗಳಗಂಗೋತ್ರಿ – 574 199
ಕರ್ನಾಟಕ, ಇಂಡಿಯಾ

Office of the Registrar,
Mangalagangothri - 574 199
Karnataka, India.

ದಿನಾಂಕ / Date:

05.12.2022

**ತುರ್ತು ರವಾನೆ**

ರಿಗೆ:

**ಸಿಂಡಿಕೇಟಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

ಮಾನ್ಯರೇ,

ವಿಷಯ: ದಿನಾಂಕ 02.12.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ಆರನೇ ವಿಶೇಷ ಸಭೆಯ ನಡವಳಿಯ ಬಗ್ಗೆ.

------

ದಿನಾಂಕ 02.12.2022 ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ಆರನೇ ವಿಶೇಷ ಸಭೆಯ ನಡವಳಿಯನ್ನು ಮುಂದಿನ ಸಿಂಡಿಕೇಟು ಸಭೆಯಲ್ಲಿ ದೃಢೀಕರಿಸುವ ಸಲುವಾಗಿ ಈ ಮೂಲಕ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

**ಕುಲಸಚಿವರು.**

ಪ್ರತಿ :

1. ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿ, ರಾಜಭವನ, ಬೆಂಗಳೂರು-560 001
2. ಸರಕಾರದ ಅಪರ ಮುಖ್ಯಕಾರ್ಯದರ್ಶಿ, (ಉನ್ನತ ಶಿಕ್ಷಣ) ಶಿಕ್ಷಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು - 560 001.
3. ಮಾನ್ಯ ಕುಲಪತಿಯವರ ಆಪ್ತ ಸಹಾಯಕಿ / ಕುಲಸಚಿವರ ಆಪ್ತ ಸಹಾಯಕಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

## ಮಂಗಳೂರು ವಿಶ್ವವಿದ್ಯಾನಿಲಯ

ದಿನಾಂಕ 02.12.2022ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2022ನೇ ಸಾಲಿನ ಆರನೆಯ ವಿಶೇಷ ಸಭೆಯ ನಡವಳಿಗಳು.

**ಉಪಸ್ಥಿತರು:**

| ಕ್ರ.ಸಂ. | | | ಸಹಿ |
|---|---|---|---|
| 1. | ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ<br>ಕುಲಪತಿಗಳು | ಅಧ್ಯಕ್ಷರು | |
| 2. | ಡಾ. ಜೆನಿಫರ್ ಲೋಲಿಟಾ ಸಿ.,<br>ಜಂಟಿ ನಿರ್ದೇಶಕರು<br>(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು | |
| 3. | ಶ್ರೀ ರವಿಚಂದ್ರ ಪಿ. ಎಂ. | ಸದಸ್ಯರು | |
| 4. | ಪ್ರೊ. ಜಯರಾಜ್ ಅಮೀನ್<br>ಡೀನರು, ಕಲಾ ನಿಕಾಯ | ಸದಸ್ಯರು | |
| 5. | ಶ್ರೀ ಲೆವಿನ್ ಡಿ'ಸೋಜ | ಸದಸ್ಯರು | |
| 6. | ಡಾ. ಶಂಕರ ಭಟ್ ಪಿ. | ಸದಸ್ಯರು | |
| 7. | ಶ್ರೀ ಕೆ. ರಮೇಶ | ಸದಸ್ಯರು | |
| 8. | ಶ್ರೀ ವಿವೇಕಾನಂದ ಪನಿಯಾಳ | ಸದಸ್ಯರು | |
| 9. | ಶ್ರೀ ರವೀಂದ್ರನಾಥ ರೈ | ಸದಸ್ಯರು | |
| 10. | ಶ್ರೀ ಮೋಹನ್ ಪಡಿವಾಳ್ | ಸದಸ್ಯರು | |
| 11. | ಡಾ. ಎ. ಪಾರ್ವತಿ ಅಪ್ಪಯ್ಯ | ಸದಸ್ಯರು | |
| 12. | ಪ್ರೊ. ವಿಶ್ವನಾಥ<br>ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗ | ಸದಸ್ಯರು | |
| 13. | ಡಾ. ಸಿಪ್ರಿಯನ್ ಮೊಂತೇರೋ<br>ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ,<br>ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ | ಸದಸ್ಯರು | |
| 14. | ಪ್ರೊ. ವೈ ಸಂಗಪ್ಪ<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ<br>ಆಹ್ವಾನಿತರು | |
| 15. | ಪ್ರೊ. ಕಿಶೋರ್ ಕುಮಾರ್ ಸಿ. ಕೆ.<br>ಕುಲಸಚಿವರು (ಆಡಳಿತ) | ಸದಸ್ಯ<br>ಕಾರ್ಯದರ್ಶಿ | |

## ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

➢ **ಸ್ವಾಗತ:**

I. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಡಿ) ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಡೀನರ ನೆಲೆಯಲ್ಲಿ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಪ್ರೊ. ಜಯರಾಜ್ ಅಮೀನ್, ಡೀನರು, ಕಲಾ ನಿಕಾಯ ಹಾಗೂ ಪ್ರಾಧ್ಯಾಪಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ಕುಲಸಚಿವರು ಸಭೆಗೆ ಸ್ವಾಗತಿಸಿದರು.

II. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಎಫ್) ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳ ಜೇಷ್ಠತೆ ಹಾಗೂ ಸರದಿಯ ನೆಲೆಯಲ್ಲಿ ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿರುವ ಶ್ರೀಮತಿ ನಳಿನಾಕ್ಷಿ ಎ.ಎಸ್., ಸರಕಾರಿ ಪ್ರಥಮ ದರ್ಜೆ ಕಾಲೇಜು, ಪುತ್ತೂರು ಇವರನ್ನು ಸದರಿಯವರ ಅನುಪಸ್ಥಿತಿಯಲ್ಲಿ ಸಭೆಗೆ ಸ್ವಾಗತಿಸಲಾಯಿತು.

➢ **ಕೃತಜ್ಞತೆ:**

I. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಡಿ) ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಡೀನರ ನೆಲೆಯಲ್ಲಿ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದ, ಪ್ರೊ. ಮಂಜುನಾಥ ಪಟ್ಟಾಭಿ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಹಾಗೂ ಪ್ರಾಧ್ಯಾಪಕರು, ಸ್ನಾತಕೋತ್ತರ ವಸ್ತುವಿಜ್ಞಾನ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರ ಸದಸ್ಯತ್ವದ ಅವಧಿಯು ದಿನಾಂಕ 30.11.2022ರಂದು ಕೊನೆಗೊಂಡಿರುವುದರಿಂದ ಸದರಿಯವರನ್ನು ಸಿಂಡಿಕೇಟು ಸದಸ್ಯತ್ವದಿಂದ ಮುಕ್ತಗೊಳಿಸಲಾಗಿದೆ.

II. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಎಫ್) ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳ ಜೇಷ್ಠತೆ ಹಾಗೂ ಸರದಿಯ ನೆಲೆಯಲ್ಲಿ ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿದ್ದ ಡಾ. ಸುಭಾಷಿನಿ ಶ್ರೀವತ್ಸ ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರ ಸದಸ್ಯತ್ವದ ಅವಧಿಯು ದಿನಾಂಕ 15.11.2022ರಂದು ಕೊನೆಗೊಂಡಿರುವುದರಿಂದ ಸದರಿಯವರನ್ನು ಸಿಂಡಿಕೇಟು ಸದಸ್ಯತ್ವದಿಂದ ಮುಕ್ತಗೊಳಿಸಲಾಗಿದೆ.

ಇವರುಗಳು ತಮ್ಮ ಸಿಂಡಿಕೇಟು ಸದಸ್ಯತ್ವದ ಅವಧಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕಾಗಿ ಇವರಿಗೆ ಸಿಂಡಿಕೇಟ್ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

## I. ನಡವಳಿಗಳ ದೃಢೀಕರಣ

ದಿನಾಂಕ 08.11.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ಏಳನೇ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ.

ದಿನಾಂಕ 08.11.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ಏಳನೇ ಸಾಮಾನ್ಯ ಸಭೆಯ ನಡವಳಿಯನ್ನು ಈ ಕೆಳಗಿನ ತಿದ್ದುಪಡಿಗಳೊಂದಿಗೆ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟು: ಸಾ.ಸ.7:43(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳ ನೇಮಕಾತಿ ಬಗ್ಗೆ.

ತಿದ್ದುಪಡಿ ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದ ಈ ಕೆಳಗಿನ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ದಿನಾಂಕ 01.01.2023ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಸೂಚಿಸಿರುವ ಅಧ್ಯಕ್ಷರುಗಳನ್ನು ನೇಮಕಾತಿ ಮಾಡಲಾಯಿತು. ಮುಂದುವರಿದು, ಆನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಸೂಚಿಸಿರುವ ಅಧ್ಯಕ್ಷರನ್ನು ತಕ್ಷಣದಿಂದ ಅನ್ವಯವಾಗುವಂತೆ ನೇಮಕಾತಿ ಮಾಡಲಾಯಿತು.

| ಕ್ರ. ಸಂ. | ಸ್ನಾತಕೋತ್ತರ ಅಧ್ಯಯನ ವಿಭಾಗ | ಅಧ್ಯಕ್ಷರ ಹೆಸರು |
|---|---|---|
| 1. | ಅರ್ಥಶಾಸ್ತ್ರ | ಪ್ರೊ. ವಿಶ್ವನಾಥ |
| 2. | ಸಮಾಜ ಕಾರ್ಯ | ಡಾ. ಮೋಹನ್ ಎಸ್. ಸಿಂಘೆ |
| 3. | ಇತಿಹಾಸ | ಪ್ರೊ. ಕೆ. ಎಂ. ಲೋಕೇಶ್ (ದಿನಾಂಕ 30.06.2023ರವರೆಗೆ (ವಯೋನಿವೃತ್ತಿ ದಿನಾಂಕ)) |
| 4. | ರಸಾಯನಶಾಸ್ತ್ರ | ಪ್ರೊ. ವಿಶಾಲಾಕ್ಷಿ ಬಿ. |
| 5. | ಭೌತಶಾಸ್ತ್ರ | ಪ್ರೊ. ಸಂಗಪ್ಪ |
| 6. | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ | ಡಾ. ಉಮೇಶ್ ನಾಯ್ಕ್ |
| 7. | ಆನ್ವಯಿಕ ಸಸ್ಯಶಾಸ್ತ್ರ | ಪ್ರೊ. ರಾಜು ಕೃಷ್ಣ ಚಲನ್ನವರ್ |

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟು: ಸಾ.ಸ.7:71(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೈಗಾರಿಕಾ ರಸಾಯನಶಾಸ್ತ್ರ ವಿಭಾಗಕ್ಕೆ ಅಧ್ಯಕ್ಷರ ನೇಮಕಾತಿ ಬಗ್ಗೆ.

ತಿದ್ದುಪಡಿ ನಿರ್ಣಯ: ಪ್ರೊ. ಬಿ. ಕೆ. ಸರೋಜಿನಿ, ಪ್ರಾಧ್ಯಾಪಕರು, ಇವರನ್ನು ದಿನಾಂಕ 08.11.2022ರಿಂದ ಅನ್ವಯವಾಗುವಂತೆ ದಿನಾಂಕ 31.12.2022ರವರೆಗೆ ವಿಭಾಗದ ಪ್ರಭಾರ ಅಧ್ಯಕ್ಷರನ್ನಾಗಿ

ಹಾಗೂ ದಿನಾಂಕ 01.01.2023ರಿಂದ ಅನ್ವಯವಾಗುವಂತೆ, ಮುಂದಿನ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಕಾತಿ ಮಾಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ: ಸಾ.ಸ.7:34(2022)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಿಯೋಜನೆ ಮೇರೆಗೆ ವಿಶೇಷಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಆಡಳಿತದಲ್ಲಿ ಸಲ್ಲಿಸಿದ ಸೇವೆಯ ನಿಯೋಜನೆ ಅವಧಿಯನ್ನು ಶ್ರೇಣಿಕರಣದ (ಎ.ಪಿ.ಎ. ಅಂಕ) ಮೌಲ್ಯಮಾಪನದಿಂದ ಹೊರಗಿಟ್ಟು ಪದೋನ್ನತಿ ನೀಡುವ ಬಗ್ಗೆ.

ತಿದ್ದುಪಡಿ ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು. ಸಮಗ್ರ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

## ಪ್ರಾಸ್ತಾವಿಕ

**ಮಾನ್ಯ ಕುಲಪತಿಗಳು ಮಾತನಾಡುತ್ತಾ ಈ ಕೆಳಗಿನ ವಿಷಯಗಳನ್ನು ಸಭೆಗೆ ತಿಳಿಸಿದರು.**

1. 21.12.2022ರಿಂದ ದಿನಾಂಕ 27.12.2022ರವರೆಗೆ ಆಳ್ವಾಸ್ ಕಾಲೇಜು ಮೂಡಬಿದರೆ ಇಲ್ಲಿ ನಡೆಯಲಿರುವ "ಅಂತರಾಷ್ಟ್ರೀಯ ಸ್ಕೌಟ್-ಗೈಡ್ ಸಾಂಸ್ಕೃತಿಕ ಜಾಂಬೂರಿ"ಗೆ ವಿಶ್ವವಿದ್ಯಾನಿಲಯದಿಂದ ಅನುದಾನ ಒದಗಿಸುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ಚರ್ಚಿಸಲಾಗಿ, ಅನುದಾನ ಒದಗಿಸುವ ಬಗ್ಗೆ ಪರಿಶೀಲಿಸಿ ಮುಂದಿನ ಸಿಂಡಿಕೇಟು ಸಭೆಗೆ ಮಾಹಿತಿ ನೀಡಬೇಕೆಂಬುದಾಗಿ ಹಣಕಾಸು ಅಧಿಕಾರಿಯವರಿಗೆ ತಿಳಿಸಲಾಯಿತು.

2. ಶ್ರೀ ರಾಮ ವಿದ್ಯಾಕೇಂದ್ರ ಕಲ್ಲಡ್ಕ ಇಲ್ಲಿ ನಡೆಯಲಿರುವ ಕ್ರೀಡೋತ್ಸವ - 2022 ಕಾರ್ಯಕ್ರಮಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದಿಂದ ರೂ.1,00,000.00 (ರೂಪಾಯಿ ಒಂದು ಲಕ್ಷ ಮಾತ್ರ) ಅನುದಾನ ಒದಗಿಸುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಲಾಗಿ ಸಭೆಯು ತನ್ನ ಅನುಮತಿಯನ್ನು ಸೂಚಿಸಿತು.

3. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಡಾ. ಬಿ. ಆರ್. ಅಂಬೇಡ್ಕರ್‌ರವರ ಪ್ರತಿಮೆ ಅನಾವರಣ ಮತ್ತು 66ನೇ ಮಹಾ ಪರಿನಿರ್ವಾಣ ದಿನಾಚರಣೆಯನ್ನು ದಿನಾಂಕ 06.12.2022ರಂದು ಹಮ್ಮಿಕೊಂಡಿರುವ ವಿಷಯವನ್ನು ಸಭೆಗೆ ತಿಳಿಸಿದರು. ಗೌರವಾನ್ವಿತ ರಾಜ್ಯಪಾಲರು ಪ್ರತಿಮೆಯನ್ನು ಅನಾವರಣ ಮಾಡಲಿದ್ದು, ಮುಖ್ಯ ಅತಿಥಿಗಳಾಗಿ ಪ್ರೊ. ಆರ್. ಎಸ್. ಕುರೀಲ್ ಗೌರವಾನ್ವಿತ ಕುಲಪತಿಗಳು ಮಹಾತ್ಮ ಗಾಂಧಿ ವಿಶ್ವವಿದ್ಯಾನಿಲಯ ಇವರು ಆಗಮಿಸಲಿರುತ್ತಾರೆ ಎಂಬ ಮಾಹಿತಿಯನ್ನು ಸಭೆಗೆ ತಿಳಿಸಿದರು. ಮಾನ್ಯ ಕುಲಪತಿಗಳು ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸದರಿ ಸಮಾರಂಭಕ್ಕೆ ಆತ್ಮೀಯವಾಗಿ ಆಮಂತ್ರಿಸಿದರು.

4. ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜಾಗಿರುವ ವಿಶ್ವವಿದ್ಯಾನಿಲಯ ಕಾಲೇಜು, ಬನ್ನಡ್ಕ ಕಾಲೇಜಿನಲ್ಲಿ ದಿನಾಂಕ 17.12.2022ರಂದು ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಡಾ. ಸಿ. ಎನ್. ಅಶ್ವತ್ಥ ನಾರಾಯಣ ಇವರ ಅಧ್ಯಕ್ಷತೆಯಲ್ಲಿ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸದರಿ ಕಾರ್ಯಕ್ರಮವು ಶ್ರೀ ಉಮಾನಾಥ ಕೋಟ್ಯಾನ್, ಮಾನ್ಯ ಶಾಸಕರು ಇವರ ನೇತೃತ್ವದಲ್ಲಿ ನಡೆಯಲಿರುವುದೆಂಬುದಾಗಿ ಸಭೆಗೆ ತಿಳಿಸಿದರು. ಸದರಿ ಕಾರ್ಯಕ್ರಮಕ್ಕೆ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಆತ್ಮೀಯವಾಗಿ ಆಮಂತ್ರಿಸಿದರು. ಸದರಿ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಈ ಕೆಳಗಿನ ಘಟಕ ಕಾಲೇಜು ಪರಿನಿಯಮಗಳನ್ನು ಅನುಮೋದನೆ ಬಗ್ಗೆ ಸಚಿವರಲ್ಲಿ ಪ್ರಸ್ತಾಪಿಸಲಾಗುವುದೆಂಬುದಾಗಿ ಸಭೆಗೆ ತಿಳಿಸಿದರು.

   1. ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು,
   2. ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು, ಮಂಗಳಗಂಗೋತ್ರಿ
   3. ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು ನೆಲ್ಯಾಡಿ

5. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕೆರಿಯರ್ ಕ್ಲೌಡ್ ಯೋಜನೆಯನ್ನು M/s. GenuineIn Technologies Private Limited ಇವರ ಮೂಲಕ ನಡೆಸುವ ಬಗ್ಗೆ ಕರಾರು ಅನುಮೋದನೆಗೊಂಡಿರುತ್ತದೆ. ಆದರೆ, ಸದರಿ ಸಾಫ್ಟ್‌ವೇರ್‌ನಲ್ಲಿ ತಾಂತ್ರಿಕ ತೊಂದರೆಗಳಿರುವುದರಿಂದ ಸದರಿ ಕರಾರನ್ನು ಕೈಬಿಡಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಮುಂದುವರಿದು, ಸದರಿ ಯೋಜನೆಯನ್ನು M/s. Anthro Pvt. Ltd ಇವರ ಮೂಲಕ ನಡೆಸಲು ಕ್ರಮಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

6. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ವಾಮಿ ವಿವೇಕಾನಂದರ ಪುತ್ಥಳಿಯನ್ನು ದಿನಾಂಕ 12.01.2023ರಂದು ಸ್ಥಾಪಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಾಗಿ ಸಭೆಗೆ ತಿಳಿಸಿದರು.

7. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ Double Entry System ನ ಪ್ರಕ್ರಿಯೆಯು ಅಂತಿಮ ಹಂತದಲ್ಲಿರುವುದಾಗಿ ಹಣಕಾಸು ಅಧಿಕಾರಿಯವರು ಸಭೆಗೆ ತಿಳಿಸಿದರು. ಪ್ರಕ್ರಿಯೆ ಸಂಬಂಧಿಸಿ, ಸವಿಸ್ತಾರವಾದ ಮಾಹಿತಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸುವುದಾಗಿ ಸಭೆಗೆ ತಿಳಿಸಿದರು.

8. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಾಂಸ್ಕೃತಿಕ ನೀತಿ (cultural policy)ಯ ಕರಡನ್ನು ತಯಾರಿಸಲಾಗಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು.

9. ಮೆ. ಹೊಂಬಾಳೆ ಫಿಲ್ಮ್ಸ್ ಪ್ರೊಡಕ್ಷನ್ ಕಂಪನಿ ಇವರಿಗೆ ಚಿತ್ರೀಕರಣಕ್ಕಾಗಿ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ಪಾರಂಪರಿಕ ಕಟ್ಟಡವನ್ನು ನೀಡುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಲಾಗಿ ಷರತ್ತುಬದ್ಧವಾಗಿ ಕಟ್ಟಡವನ್ನು ಬಳಸಿಕೊಳ್ಳಲು ಅನುಮತಿಯನ್ನು ನೀಡಬಹುದೆಂಬುವುದಾಗಿ ಸಿಂಡಿಕೇಟು ನಿರ್ಣಯಿಸಿತು.

II. **ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು.**

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ:ವಿ.ಸ.6:1(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 41ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮದ ಬಗ್ಗೆ.

ನಿರ್ಣಯ: 2023ನೇ ಫೆಬ್ರವರಿ ತಿಂಗಳ ಕೊನೆಯ ವಾರದಲ್ಲಿ ಘಟಿಕೋತ್ಸವ ಕಾರ್ಯಕ್ರಮವನ್ನು ನಡೆಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಗೌರವ ಡಾಕ್ಟರೇಟ್ ಪದವಿಗೆ ಸಂಬಂಧಿಸಿ, ಪಟ್ಟಿಯನ್ನು ತಯಾರಿಸಿಕೊಂಡು, ಪರಿಶೀಲನಾ ಸಮಿತಿಗೆ ವಿಶ್ವವಿದ್ಯಾನಿಲಯದ ಪ್ರತಿನಿಧಿಯನ್ನು ನಾಮನಿರ್ದೇಶನ ಮಾಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ:ವಿ.ಸ.6:2(2022)**

ವಿಷಯ: Government First Grade College, Belthangady, ಇಲ್ಲಿರುವ ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಮತ್ತು ಸ್ನಾತಕೋತ್ತರ ಕನ್ನಡ ವಿಭಾಗವನ್ನು ಪಿಹೆಚ್.ಡಿ. ವ್ಯಾಸಂಗದ ಸಂಶೋಧನಾ ಕೇಂದ್ರವನ್ನಾಗಿ ಮಾನ್ಯತೆ ನೀಡುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಾರ್ವತ್ರಿಕ:ವಿ.ಸ.6:3(2022)**

ವಿಷಯ: ಸುಳ್ಯದಲ್ಲಿ ನಡೆಯುವ ಪಯಸ್ವಿನಿ ಕೃಷಿ ಮೇಳದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸಹಯೋಗ ನೀಡುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಮಂಗಳೂರು ವಿಶ್ವವಿದ್ಯಾನಿಲಯದಿಂದ ರೂ.7,00,000.00 (ರೂಪಾಯಿ ಏಳು ಲಕ್ಷ ಮಾತ್ರ) ಕ್ಕೆ ಮೀರದಂತೆ ಪ್ರಾಯೋಜಕತ್ವ ಒದಗಿಸಬಹುದೆಂದು ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಸಾರ್ವತ್ರಿಕ:ವಿ.ಸ.6:4(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಕ್ರೀಡಾ ಕಾರ್ಯಕ್ರಮಗಳಿಗೆ ಸಂಬಂಧಿಸಿ ದಿನಾಂಕ 19.02.2022ರಂದು ನಡೆದ 2021-22ನೇ ಸಾಲಿನ ಕ್ರೀಡಾ ಸಲಹಾ ಸಮಿತಿ ಸಭೆಯ ನಡವಳಿಗೆ ಅನುಮೋದನೆ ನೀಡುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟು:ವಿ.ಸ.6:5(2022)**

ವಿಷಯ: ಸ್ನಾತಕೋತ್ತರ ಕೇಂದ್ರ, ಜ್ಞಾನ ಕಾವೇರಿ ಕ್ಯಾಂಪಸ್, ಕುಶಾಲನಗರ, ಕೊಡಗು ಇಲ್ಲಿಯ ಸೂಕ್ಷ್ಮಾಣು ಜೀವ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರ ನೇಮಕಾತಿ ಬಗ್ಗೆ.

ನಿರ್ಣಯ: ಪ್ರೊ. ಎಂ. ಜಯಶಂಕರ್ ಇವರನ್ನು ಸ್ನಾತಕೋತ್ತರ ಸೂಕ್ಷ್ಮಾಣು ಜೀವ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಚಿಕ್ಕ ಅಳುವಾರ, ಕೊಡಗು ಇಲ್ಲಿನ ಅಧ್ಯಕ್ಷರನ್ನಾಗಿ ನೇಮಕಾತಿ ಮಾಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ವಿ.ಸ.6:6(2022)

ವಿಷಯ: ಪದವಿ ಮಟ್ಟದ ಇಂಟೀರಿಯರ್ ಡಿಸೈನ್ ಮತ್ತು ಡೆಕೋರೇಶನ್ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

ನಿರ್ಣಯ: ಪದವಿ ಮಟ್ಟದ ಇಂಟೀರಿಯರ್ ಡಿಸೈನ್ ಮತ್ತು ಡೆಕೋರೇಶನ್ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ವಿ.ಸ.6:7(2022)

ವಿಷಯ: ಸ್ನಾತಕೋತ್ತರ ಇತಿಹಾಸ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

ನಿರ್ಣಯ: ಸ್ನಾತಕೋತ್ತರ ಇತಿಹಾಸ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಕಾನೂನು ಘಟಕ:ವಿ.ಸ.6:8(2022)

ವಿಷಯ: ಗ್ರಾಮೀಣ ಬ್ಯಾಂಕಿಂಗ್ ಮತ್ತು ನಿರ್ವಹಣಾ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿ ತಾತ್ಕಾಲಿಕ ನೆಲೆಯಲ್ಲಿ ಬೆರಳಚ್ಚುಗಾರ-ವಾ-ಗುಮಾಸ್ತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಸೀತಾರಾಮ ಎಂ., ಇವರು ತಮ್ಮ ನಿವೃತ್ತಿ ಸೌಲಭ್ಯ, ಮಾಸಿಕ ಪಿಂಚಣಿ ಹಾಗೂ ವೇತನ ವ್ಯತ್ಯಾಸದ ಮೊತ್ತ ಬೇಡಿಕೆಯ ಕುರಿತು ಮಂಗಳೂರು ವಿಶ್ವವಿದ್ಯಾನಿಲಯದ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ. : 9330/2022(S-RES) ಯಲ್ಲಿ ಕೋರಿರುವ ನಿವೃತ್ತಿ ಸೌಲಭ್ಯಗಳನ್ನು ಪರಿಗಣಿಸುವ ಬಗ್ಗೆ.

ನಿರ್ಣಯ: ಶ್ರೀ ಸೀತಾರಾಮ ಎಂ. ಇವರ ಸೇವೆಯನ್ನು ದಿನಾಂಕ 21.11.1985ರಿಂದ ಅನ್ವಯವಾಗುವಂತೆ ಸಕ್ರಮಗೊಳಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಮುಂದುವರಿದು, ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪು ಬಂದ ನಂತರ ಸದರಿ ತೀರ್ಪಿನನ್ವಯ ಶ್ರೀ ಸೀತಾರಾಮ ಎಂ., ಇವರಿಗೆ ನೀಡಬೇಕಾಗಿರುವ ಮೊತ್ತವನ್ನು ಏಕಗಂಟಿನಲ್ಲಿ ಬಡ್ಡಿ ರಹಿತವಾಗಿ ನೀಡಲು ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ವಿ.ಸ.6:9(2022)

ವಿಷಯ: ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ಆವರಣದಲ್ಲಿ ಕರ್ನಾಟಕ ಬ್ಯಾಂಕ್‌ನ ಸಹಯೋಗದೊಂದಿಗೆ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ಕೊಡಮಾಡಿರುವ ಬಯಲು ರಂಗ ಮಂದಿರದ ಕಾಮಗಾರಿಗೆ ಸಂಬಂಧಿಸಿದ ಕೊರತೆ ಮೊತ್ತ ಭರಿಸಿಕೊಡುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ:ವಿ.ಸ.6:10(2022)

ವಿಷಯ: ಕನ್ನಡ ಶಾಲಾ ಮಕ್ಕಳ ಹಬ್ಬ ಕಾರ್ಯಕ್ರಮಕ್ಕೆ ಸಂಬಂಧಿಸಿ ಮಂಗಳೂರು ವಿಶ್ವವಿದ್ಯಾನಿಲಯದಿಂದ ಪ್ರಾಯೋಜಕತ್ವ ಶುಲ್ಕದ ಪಾವತಿಗೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.

ನಿರ್ಣಯ: ಘಟನೋತ್ತರವಾಗಿ ಅನುಮೋದಿಸಲಾಯಿತು.

| | |
|---|---|
| **ಕಾರ್ಯಸೂಚಿ ಸಂಖ್ಯೆ:** | **ಸಿಬ್ಬಂದಿ:ವಿ.ಸ.6:11(2022)** |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯಕ್ಕೆ ನಿರ್ದೇಶಕರನ್ನು ನೇಮಕ ಮಾಡುವ ಬಗ್ಗೆ. |
| ನಿರ್ಣಯ: | ಡಾ. ಪರಮೇಶ್ವರ, ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗ, ಇವರನ್ನು ಮುಂದಿನ ಆರು ತಿಂಗಳ ಅವಧಿಗೆ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ಪ್ರಭಾರ ನಿರ್ದೇಶಕರನ್ನಾಗಿ ನೇಮಕಾತಿ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.<br>ಮುಂದುವರಿದು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯಕ್ಕೆ ನಿರ್ದೇಶಕರ ನೇಮಕಾತಿ ಪ್ರಕ್ರಿಯೆಯನ್ನು ಶೀಘ್ರವಾಗಿ ಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು. |
| | |
| **ಕಾರ್ಯಸೂಚಿ ಸಂಖ್ಯೆ:** | **ಡಿಇವಿ:ವಿ.ಸ.6:12(2022)** |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅರೆಭಾಷೆ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ. |
| ನಿರ್ಣಯ: | ಮಂಗಳೂರು ವಿಶ್ವವಿದ್ಯಾನಿಲಯದ ಅರೆಭಾಷೆ ಸಂಶೋಧನಾ ಕೇಂದ್ರಕ್ಕೆ ಸಂಯೋಜಕರನ್ನು ನೇಮಕಾತಿ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು. |
| | |
| **ಕಾರ್ಯಸೂಚಿ ಸಂಖ್ಯೆ:** | **ಸಿಬ್ಬಂದಿ:ವಿ.ಸ.6:13(2022)** |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಬಳಸಿಕೊಳ್ಳುವ ಬಗ್ಗೆ. |
| ನಿರ್ಣಯ: | ಘಟನೋತ್ತರವಾಗಿ ಅನುಮೋದಿಸಲಾಯಿತು.<br>ಮುಂದಿನ ನೇಮಕಾತಿಗಳನ್ನು ಸರಕಾರದ ಮೀಸಲಾತಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |
| | |
| **ಕಾರ್ಯಸೂಚಿ ಸಂಖ್ಯೆ:** | **ಪರೀಕ್ಷಾಂಗ:ವಿ.ಸ.6:14(2022)** |
| ವಿಷಯ: | ಎಪ್ರಿಲ್/ಮೇ 2022ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ / ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ. |
| ನಿರ್ಣಯ: | ಅನುಮೋದಿಸಲಾಯಿತು. |
| | |
| **ಕಾರ್ಯಸೂಚಿ ಸಂಖ್ಯೆ:** | **ಸಿಂಡಿಕೇಟು:ವಿ.ಸ.6:15(2022)** |
| ವಿಷಯ: | ಶ್ರೀ ರಮೇಶ ಕೆ., ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ವಿಶ್ವವಿದ್ಯಾನಿಲಯದ ಪರೀಕ್ಷಾ ತಂತ್ರಾಂಶ (MU Linx) ಅಳವಡಿಸಿದ ನಂತರ ವಿಶ್ವವಿದ್ಯಾನಿಲಯಕ್ಕಾದ ಅನುಕೂಲದ ಕುರಿತಂತೆ ಮಾಹಿತಿ ನೀಡುವುದು. |

| | |
|---|---|
| ವಿಷಯ 1 | MU Linx ತಂತ್ರಾಂಶವನ್ನು ಅಳವಡಿಸಿದ ನಂತರ ಎಷ್ಟು ಪರೀಕ್ಷೆಗಳನ್ನು ನಡೆಸಲಾಯಿತು ಹಾಗೂ ಎಷ್ಟು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು ಇದರ ನಿಖರವಾದ ಸಂಖ್ಯೆಯನ್ನು ಒದಗಿಸುವುದು. |
| ಮಾಹಿತಿ: | MU Linxತಂತ್ರಾಂಶವನ್ನು ಅಳವಡಿಸಿದ ನಂತರ 6 ಪದವಿ ಪರೀಕ್ಷೆಗಳನ್ನು ಮತ್ತು 5 ಸ್ನಾತಕೋತ್ತರ ಪರೀಕ್ಷೆಗಳನ್ನು ನಡೆಸಲಾಯಿತು. ಸದರಿ ಪರೀಕ್ಷೆಗಳಲ್ಲಿ 2,91,324 ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಬರೆದಿದ್ದರು ಎಂಬ ಮಾಹಿತಿಯನ್ನು ಕುಲಸಚಿವರು (ಪರೀಕ್ಷಾಂಗ) ಇವರು ಸಭೆಗೆ ನೀಡಿದರು. |
| ವಿಷಯ 2 | ಈ ಎಲ್ಲಾ ಪರೀಕ್ಷೆಗೆ ತಗಲಿರುವ ಖರ್ಚು ವೆಚ್ಚದ ಕುರಿತಂತೆ ಮಾಹಿತಿ ಒದಗಿಸುವುದು. |
| ಮಾಹಿತಿ: | ಎಲ್ಲಾ ಪರೀಕ್ಷೆಗಳಿಗೆ ರೂ.2,23,55,081.60(ರೂಪಾಯಿ ಎರಡು ಕೋಟಿ ಇಪ್ಪತ್ತಮೂರು ಲಕ್ಷದ ಐವತ್ತೈದು ಸಾವಿರ ಎಂಬತ್ತೊಂದು ಮತ್ತು ಅರವತ್ತು ಪೈಸೆ ಮಾತ್ರ) ಮೊತ್ತವು ಖರ್ಚಾಗಿರುತ್ತದೆ ಎಂಬ ಮಾಹಿತಿಯನ್ನು ಕುಲಸಚಿವರು (ಪರೀಕ್ಷಾಂಗ) ಇವರು ಸಭೆಗೆ ನೀಡಿದರು. |
| ವಿಷಯ 3 | ಈ ಹಿಂದೆ ಪರೀಕ್ಷೆಗೆ ನಡೆಸಲು ಎಟ್ರೀಸ್ ತಂತ್ರಾಂಶಕ್ಕೆ ಖರ್ಚು ಮಾಡುತ್ತಿದ್ದ ವಿವರ ಹಾಗೂ MU Linx ತಂತ್ರಾಂಶಕ್ಕೆ ಹೋಲಿಕೆ ಮಾಡಿದಾಗ ವಿಶ್ವವಿದ್ಯಾನಿಲಯಕ್ಕೆ ಉಳಿತಾಯವಾಗಿರುವ ಹಣಕಾಸಿನ ವಿವರವನ್ನು ಒದಗಿಸುವುದು. |
| ಮಾಹಿತಿ: | ವಿಶ್ವವಿದ್ಯಾನಿಲಯಕ್ಕೆ ರೂ.2,86,26,618.40(ರೂಪಾಯಿ ಎರಡು ಕೋಟಿ ಎಂಬತ್ತಾರು ಲಕ್ಷದ ಇಪ್ಪತ್ತಾರು ಸಾವಿರದ ಆರುನೂರ ಹದಿನೆಂಟು ಮತ್ತು ನಲವತ್ತು ಪೈಸೆ ಮಾತ್ರ) ಮೊತ್ತವು ಉಳಿತಾಯವಾಗಿರುತ್ತದೆ ಎಂಬ ಮಾಹಿತಿಯನ್ನು ಕುಲಸಚಿವರು (ಪರೀಕ್ಷಾಂಗ) ಇವರು ಸಭೆಗೆ ನೀಡಿದರು. |
| ವಿಷಯ 4 | MU Linx ತಂತ್ತಾಂಶವನ್ನು ಅಳವಡಿಸಿದ ನಂತರ ಉತ್ತರ ಪತ್ರಿಕೆಯ ಮೌಲ್ಯಮಾಪನವಾದ ಎಷ್ಟು ದಿನದಲ್ಲಿ ನಿಖರವಾದ ಫಲಿತಾಂಶವನ್ನು ಪ್ರಕಟಿಸಲು ಸಾಧ್ಯವಾಗಿದೆ ಎಂಬುವುದರ ಬಗ್ಗೆ ಮಾಹಿತಿ ನೀಡುವುದು. |
| ಮಾಹಿತಿ: | ಮೂರು ದಿನಗಳಲ್ಲಿ ಫಲಿತಾಂಶವನ್ನು ನೀಡಲಾಗಿದೆ ಎಂಬ ಮಾಹಿತಿಯನ್ನು ಕುಲಸಚಿವರು (ಪರೀಕ್ಷಾಂಗ) ಇವರು ಸಭೆಗೆ ನೀಡಿದರು. |
| ವಿಷಯ 5 | MU Linx ತಂತ್ರಾಂಶವನ್ನು ಅಳವಡಿಸುವಾಗ ಎಷ್ಟು ಜನರಿಗೆ ತಾತ್ಕಾಲಿಕವಾಗಿ ಉದ್ಯೋಗ ನೀಡಲು ಸಾಧ್ಯವಾಗಿದೆ ಎಂಬುವುದರ ಬಗ್ಗೆ ಮಾಹಿತಿ ನೀಡುವುದು. |
| ಮಾಹಿತಿ: | MU Linx ತಂತ್ರಾಂಶವನ್ನು ಅಳವಡಿಸುವಾಗ 25 ಜನರಿಗೆ ತಾತ್ಕಾಲಿಕ ಉದ್ಯೋಗ ನೀಡಲು ಸಾಧ್ಯವಾಗಿದೆ ಎಂದು ಕುಲಸಚಿವರು (ಪರೀಕ್ಷಾಂಗ) ಇವರು ಸಭೆಗೆ ತಿಳಿಸಿದರು. |

ಮುಂದುವರಿದು, MU Linx ತಂತ್ರಾಂಶವನ್ನು ಉಚಿತವಾಗಿ ಒದಗಿಸಿ ಕೋಟ್ಯಾಂತರ ರೂಪಾಯಿ ಹಣವನ್ನು ವಿಶ್ವವಿದ್ಯಾನಿಲಯಕ್ಕೆ ಉಳಿತಾಯವಾಗಲು ಕಾರಣೀಭೂತರಾದ ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಕರ್ನಾಟಕ ಪಾಲಿಟೆಕ್ನಿಕ್ ಮಂಗಳೂರಿನ ಪ್ರಾಂಶುಪಾಲರಾದ ಶ್ರೀ ಹರೀಶ್ ಶೆಟ್ಟಿಯವರನ್ನು ಅಭಿನಂದಿಸಲಾಯಿತು.

ಅವರನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ವಿಶವಿದ್ಯಾನಿಲಯದಿಂದ ಗೌರವಿಸಬೇಕೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು. ಈ ತಂತ್ರಾಂಶ ಯಶಸ್ವಿಯಾಗಲು ರಾತ್ರಿ ಹಗಲು ಕೆಲಸ ಮಾಡಿರುವ ಪರೀಕ್ಷಾಂಗ ಕುಲಸಚಿವರಾದ ಪ್ರೊ. ಪಿ. ಎಲ್. ಧರ್ಮ ಹಾಗೂ ಸಿಬ್ಬಂದಿ ವರ್ಗದವರಿಗೆ ಹಾಗೂ ಎಲ್ಲಾ ಸಂಯೋಜಿತ ಕಾಲೇಜಿನ ಸಿಬ್ಬಂದಿಯವರಿಗೆ ಧನ್ಯವಾದವನ್ನು ಸಲ್ಲಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಪರೀಕ್ಷಾಂಗ:ವಿ.ಸ.6:16(2022)**

ವಿಷಯ: ದ್ವಿತೀಯ ಸೆಮಿಸ್ಟರ್‌ನ ರಾಷ್ಟ್ರೀಯ ಶಿಕ್ಷಣ ನೀತಿ 2020ರ BBAKALN 201 - ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಉಂಟಾದ ಲೋಪಗಳ ಬಗ್ಗೆ.

ನಿರ್ಣಯ: ಪ್ರಸ್ತಾವನೆಯಲ್ಲಿ ನಮೂದಿಸಿರುವಂತೆ, ಹಿಂದಿನ ಪ್ರಕರಣಗಳಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಸದರಿ ಪರೀಕ್ಷಾ ಮಂಡಳಿಗೂ ಅನ್ವಯಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಪರೀಕ್ಷಾಂಗ:ವಿ.ಸ.6:17(2022)**

ವಿಷಯ: ಪಿಹೆಚ್.ಡಿ. ಪದವಿ ಪ್ರದಾನ ಮಾಡಿದ ಬಗ್ಗೆ.

ನಿರ್ಣಯ: ಅವಗಾಹಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ:ವಿ.ಸ.6:18(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ IBM Uncubation Centre ನ್ನು ಮೇಲ್ದರ್ಜೆಗೇರಿಸಲು ಉಪಕರಣಗಳನ್ನು ಖರೀದಿಸಿರುವ ಕುರಿತು Tri-Party ಕರಾರು ಮಾಡಿಕೊಂಡಿರುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಬ್ಬಂದಿ:ವಿ.ಸ.6:19(2022)**

ವಿಷಯ: ನೂತನ ಕೊಡಗು ವಿಶ್ವವಿದ್ಯಾನಿಲಯದ ಸ್ಥಾಪನೆ-ಆರ್ಥಿಕ, ಭೌತಿಕ ಹಾಗೂ ಮಾನವ ಸಂಪನ್ಮೂಲಗಳ ವರ್ಗಾವಣೆಗೆ ಸಂಬಂಧಿಸಿ ಸರಕಾರದಿಂದ ವಿಧಿಸಲಾಗಿರುವ ಷರತ್ತುಗಳ ಬಗ್ಗೆ.

ನಿರ್ಣಯ: ಪ್ರಸ್ತಾವನೆಯ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಯಿತು. ಹುದ್ದೆಗಳ ಮರು ಹಂಚಿಕೆ ಬಗ್ಗೆ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು. ಜಮೀನು, ಕಟ್ಟಡ, ಪೀಠೋಪಕರಣ ಮತ್ತು ಸಾಮಗ್ರಿಗಳನ್ನು ಸರಕಾರದ ಆದೇಶದಂತೆ ವರ್ಗಾವಣೆ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಮುಂದುವರಿದು, ಸ್ಥಿರಾಸ್ತಿ ಮತ್ತು ಚರಾಸ್ತಿಗಳಿಗೆ ಸಂಬಂಧಿಸಿ, ದಾಸ್ತಾನುವಹಿಗಳನ್ನು ಪರಿಶೀಲಿಸಿಕೊಂಡು, ವರ್ಗಾವಣೆ ಮಾಡಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಇತರ ವಿಷಯಗಳು

1. ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭೆಯನ್ನು ಪಂಚತಾರಾ ಹೋಟೇಲ್‌ನಲ್ಲಿ ನಡೆಸಲಾಗಿದೆ ಎಂಬುದಾಗಿ ಅಧಿವೇಶನದಲ್ಲಿ ಮತ್ತು ಪತ್ರಿಕೆಗಳಲ್ಲಿ ಬಂದಿರುವ ವರದಿಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಮಂಗಳೂರು ವಿಶ್ವವಿದ್ಯಾನಿಲಯ ಯಾವುದೇ ಸಭೆಗಳನ್ನು ಪಂಚತಾರಾ ಹೋಟೇಲ್‌ಗಳಲ್ಲಿ ನಡೆಸಿರುವುದಿಲ್ಲದಿರುವುದರಿಂದ ಈ ಬಗ್ಗೆ ಸೂಕ್ತ ಸ್ಪಷ್ಟೀಕರಣವನ್ನು ಎಲ್ಲಾ ದಾಖಲೆಗಳು ಮತ್ತು ಛಾಯಾಚಿತ್ರಗಳ ಅಡಕಗಳೊಂದಿಗೆ ಕರ್ನಾಟಕ ವಿಧಾನಸಭಾ ಸ್ಪೀಕರ್‌ಗೆ ಪತ್ರ ಬರೆಯಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಮುಂದುವರಿದು, ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಲು ಕ್ರಮಕೈಗೊಳ್ಳುವುದು ಅಥವಾ ಈ ಬಗ್ಗೆ ಪತ್ರಿಕಾ ಗೋಷ್ಠಿ ಕರೆಯಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

2. ಡಾ. ಅನಿತಾ ರವಿಶಂಕರ್, ಇವರಿಗೆ ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಹಂಚಿಕೆಯಾಗಿದ್ದ ಕೊಠಡಿಗೆ ಕರ್ನಾಟಕ ಲೋಕಾಯುಕ್ತರಿಂದ ಹಾಕಿರುವ ಬೀಗವನ್ನು ತೆರವುಗೊಳಿಸಿರುವ ವಿಷಯವನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಸದರಿಯವರ ಸೇವೆಯನ್ನು ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಬಳಸಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

3. ಉಪಕುಲಸಚಿವರ ಮುಂಭಡ್ತಿ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, 18.11.2022ರ ಸರಕಾರದ ಪತ್ರವನ್ನು ಕುಲಸಚಿವರು ಸಭೆಗೆ ಮಂಡಿಸಿದರು. ಸುಧೀರ್ಘ ಚರ್ಚೆಯ ನಂತರ ಉಪಕುಲಸಚಿವ ಹುದ್ದೆಯ ಮುಂಭಡ್ತಿಗೆ ಸಂದರ್ಶನವನ್ನು ದಿನಾಂಕ 05.12.2022ರಂದು ಅಥವಾ ಸಾಧ್ಯವಾದಷ್ಟು ಶೀಘ್ರದಲ್ಲಿ ಕಾನೂನಿನನ್ವಯ ನಡೆಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಆದರೆ, ನೇಮಕಾತಿಯ ಆದೇಶವನ್ನು ರಾಜ್ಯ ಸರಕಾರದ ಸ್ಪಷ್ಟೀಕರಣವನ್ನು ಕೋರಿ ಈಗಾಗಲೇ ಬರೆದಿರುವ ಪತ್ರ ದಿನಾಂಕ:28.11.2022 ಕ್ಕೆ ಉತ್ತರವು ಸ್ವೀಕೃತವಾದ ತಕ್ಷಣವೇ ಮುಂಭಡ್ತಿಯ ಆದೇಶವನ್ನು ಸಿಂಡಿಕೇಟಿನ ಅನುಮತಿಯನ್ನು ಪಡೆದು ನೀಡಲು ನಿರ್ಣಯಿಸಲಾಯಿತು.

4. ದಿನಾಂಕ 30.11.2022ರಂದು ಬೆಂಗಳೂರಿನಲ್ಲಿ ನಡೆದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಬ್ಯಾಕ್‌ಲಾಗ್ ಹುದ್ದೆಗಳಿಗೆ ಸಂಬಂಧಪಟ್ಟು ಮಂಗಳೂರು ವಿಶ್ವವಿದ್ಯಾನಿಲಯದಿಂದ ಸರಕಾರಕ್ಕೆ ಸಲ್ಲಿಸಲಾಗಿರುವ ಮಾಹಿತಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಒದಗಿಸಬೇಕೆಂಬುದಾಗಿ ನಿರ್ಣಯಿಸಲಾಯಿತು.

5. ದಕ್ಷಿಣ ವಲಯ ಮತ್ತು ಅಖಿಲಭಾರತ ಅಂತರ ವಿಶ್ವವಿದ್ಯಾನಿಲಯ ಕ್ರೀಡಾ ಸ್ಪರ್ಧೆಗಳಿಗೆ ಮಂಗಳೂರು ವಿಶ್ವವಿದ್ಯಾನಿಲಯದ ಅನುದಾನದ ಮೊತ್ತ ರೂ.5,00,000.00 (ರೂಪಾಯಿ ಐದು ಲಕ್ಷಗಳು ಮಾತ್ರ) ನ್ನು ನೀಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಮಾನ್ಯ ಕುಲಪತಿಗಳು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

**ಸಹಿ/-**
ಕುಲಸಚಿವರು

**ಸಹಿ/-**
ಕುಲಪತಿಗಳು.